**ಎಂವಿಸಿ ಸಂಖ್ಯೆಃ 754/2023 ಪಿಡಬ್ಲೂಃ 1**

**ದಿನಾಂಕಃ 06-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

1. ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು.
2. ಆಸ್ಪತ್ರೆಯಿಂದ ಬಿಡುಗಡೆಯಾದ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು.
3. 2 ವರದಿಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು.
4. 15 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಯಿತು.
5. 7 ಸಲಹಾ ಚೀಟಿಗಳನ್ನು ನಿಪಿ-12 ಎಂದು ಗುರುತಿಸಲಾಯಿತು.
6. 1 ಎಕ್ಸರೇಯನ್ನು ನಿಪಿ-13 ಎಂದು ಗುರುತಿಸಲಾಯಿತು.
7. ನನ್ನ ಮೂಲ ಆಧಾರ ಕಾರ್ಡ, ಪಾಸ್ ಪುಸ್ತಕವನ್ನು ಕ್ರಮವಾಗಿ ನಿಪಿ-14, 15 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ಸದ್ರಿ ನಾವು ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದಾಗ ನಮ್ಮ ಹಿಂದೆಯಿಂದ ಮತ್ತೊಂದು ಮೋಟಾರ್ ಸೈಕಲ್ ಡಿಕ್ಕಿಪಡಿಸಿ ಅಪಘಾತಪಡಿಸಿದೆ. ನಮಗೆ ಅಪಘಾತಪಡಿಸಿದ ದ್ವಿಚಕ್ರ ವಾಹನದಲ್ಲಿ 3 ಜನ ಕುಳಿತಿದ್ದರು. ನಮ್ಮ ದ್ವಿಚಕ್ರ ವಾಹನವನ್ನು ನನ್ನ ಗಂಡ ಸವಾರಿ ಮಾಡುತ್ತಿದ್ದ. ನನ್ನ ಗಂಡನಿಗೆ ಚಾಲನಾ ಪ್ರಮಾಣ ಪತ್ರ ಇರಲಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಚಾಲನಾ ಪ್ರಮಾಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಗಂಡನಿಗೆ ಚಾಲನಾ ಪ್ರಮಾಣ ಪತ್ರ ಇರದೇ ಇದ್ದ ಕಾರಣ ಆತ ರೂ.1,000/- ಕಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣ ದೂರು ಸಲ್ಲಿಸಲು 3 ದಿನ ವಿಳಂಬ ಆಗಿದೆ. ನಾನು 5 ದಿನ ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಒಳರೋಗಿಯಾಗಿ ಯಾವ ಆಸ್ಪತ್ರೆಯಲ್ಲಿಯೂ ಕೂಡ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ಸದ್ರಿ ಅಪಘಾತ ನನ್ನ ಗಂಡ ತತಕ್ಷಣ ಬ್ರೇಕನ್ನು ಅಳವಡಿಸಿದ್ದರಿಂದ ಆತನ ತಪ್ಪಿನಿಂದ ಅಪಘಾತ ಸಂಭವಿಸಿದೆ ಎಂದರೆ ಸರಿ ಅಲ್ಲ.

ಆ ಕಾರಣಕ್ಕಾಗಿ ನಾವು 3 ದಿನ ವಿಳಂಬ ಮಾಡಿ ದೂರು ದಾಖಲಿಸಿರುತ್ತೇವೆ ಎಂದರೆ ಸರಿ ಅಲ್ಲ. ನಿಧಾನವಾಗಿ ನಮ್ಮ ಹಿಂದಿನಿಂದ ಮೋಟಾರ್ ಸೈಕಲ್ ಬರುತ್ತಿತ್ತು ಎಂದರೆ ಸರಿ ಅಲ್ಲ. ಸದ್ರಿ ಅಪಘಾತದಲ್ಲಿ ನಮ್ಮ ಹಿಂದಿನಿಂದ ಬಂದ ದ್ವಿಚಕ್ರ ವಾಹನ ಸವಾರನ ಯಾವುದೇ ತಪ್ಪು ಇಲ್ಲ ಎಂದರೆ ಸರಿ ಅಲ್ಲ. ಪಂಚನಾಮೆ ಸಮಯಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆ.

ನಿಪಿ-9 ರ ಪ್ರಕಾರ ಅಪಘಾತವಾದ 1 ತಿಂಗಳ ನಂತರ ನಾನು ಆರೈಕೆ ಆಸ್ಪತ್ರೆಗೆ ದಾಖಲಾಗಿದ್ದೆ ಎಂದರೆ ನಿಜ. ಅದೇ ದಿನ ನನ್ನನ್ನು ಬಿಡುಗಡೆಗೊಳಿಸಿರುತ್ತಾರೆ ಎಂದರೆ ಸರಿ ಅಲ್ಲ. ನನಗೆ ಮೂಳೆ ಮುರಿತದ ಗಾಯ ಆಗಿಲ್ಲ ಎಂದರೆ ಸರಿ ಅಲ್ಲ. ನಾನೇ ಸ್ವತಃ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ ಎಂದರೆ ನಿಜ. ನನಗೆ ಮೂಳೆ ಮುರಿತ ಆಗದೇ ಇದ್ದ ಕಾರಣ ನಾನು ಪೊಲೀಸ್ ಠಾಣೆಗೆ, ಪಂಚನಾಮೆ ಮಾಡುವ ಸಮಯ ಘಟನಾ ಸ್ಥಳಕ್ಕೆ ಮತ್ತು ವಾಹನ ಜಪ್ತು ಪಂಚನಾಮೆಗೆ ಹೋಗಿರುತ್ತೇನೆ ಎಂದರೆ ಸರಿ ಅಲ್ಲ. ಸದ್ರಿ ಹಾಜರುಪಡಿಸಿದ ವೈದ್ಯಕೀಯ ಬಿಲ್ಲುಗಳನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ ಅಲ್ಲ. ಮೂರುವರೆ ಲಕ್ಷ ಹಣವನ್ನು ಖರ್ಚು ಮಾಡಿದ್ದು 1 ಲಕ್ಷ ಮುಂದಿನ ಚಿಕಿತ್ಸೆಗಾಗಿ ಬೇಕು ಎಂದು ಕೇಳಿದ್ದು ಅಮಾನ್ಯವಾಗಿರುತ್ತದೆ ಎಂದರೆ ಸರಿ ಅಲ್ಲ.

ನನಗೆ ಯಾವುದೇ ಅಂಗನ್ಯೂನ್ಯತೆ ಇರದೇ ಇದ್ದರೂ ಕೂಡ ನಿಪಿ-8 ದಾಖಲೆಯನ್ನು ಪಡೆದುಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿ ಅಲ್ಲ. ನನಗೆ ಸಾದಾ ಗಾಯ ಆಗಿದ್ದರಿಂದ ಸಂಪೂರ್ಣವಾಗಿ ಗುಣಮುಖಳಾಗಿದ್ದೇನೆ ಎಂದರೆ ಸರಿ ಅಲ್ಲ. ಅಪಘಾತಪಡಿಸಿದ ದ್ವಿಚಕ್ರ ವಾಹನ ಸವಾರನಿಗೆ ಚಾಲನಾ ಪ್ರಮಾಣ ಪತ್ರ ಇದ್ದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎದುರುದಾರ ನಂಬ್ರ 1 ಈತನ ವಿರುದ್ಧ ಚಾಲನಾ ಪ್ರಮಾಣ ಪತ್ರ ಹೊಂದಿರದೇ ಇದ್ದ ಕಾರಣ ಆತನ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಎದುರುದಾರ ನಂಬ್ರ 1 ವಿಮಾ ಪಾಲಿಸಿ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾನೆ ಎಂದರೆ ಸರಿ ಅಲ್ಲ.

ಅಪಘಾತ ಸಮಯದಲ್ಲಿ ನನಗೆ 43 ವರ್ಷ ಪ್ರಾಯ ಇತ್ತು. ಅಪಘಾತ ಸಮಯದಲ್ಲಿ ನನಗೆ 51 ವರ್ಷ ವಯಸ್ಸಾಗಿತ್ತು ಎಂದರೆ ಸರಿ ಅಲ್ಲ. ನಾನು ಮನೆ ಕೆಲಸ ಮತ್ತು ಟೈಲರಿಂಗ್ ಕೆಲಸ ಮಾಡಿ 30 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ನಾನು ವಿಳಂಬವಾಗಿ ಅರ್ಜಿ ಸಲ್ಲಿಸಿದ್ದರಿಂದ ಆ ಕಾರಣದಿಂದ ಈ ಪ್ರಕರಣ ಊರ್ಜಿತವಲ್ಲ ಎಂದರೆ ಸರಿ ಅಲ್ಲ. ಅಪಘಾತವಾಗಿದ್ದು ದಾವಣಗೆರೆಯಲ್ಲಿ

ಮತ್ತು ನನ್ನ ವಾಸ ಕೂಡ ದಾವಣಗೆರೆಯಲ್ಲಿ ಎಂದರೆ ನಿಜ. ಆದ್ದರಿಂದ ಸದ್ರಿ ಅರ್ಜಿ ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ ಎಂದರೆ ಸರಿ ಅಲ್ಲ. ಈ ಮೇಲಿನ ಕಾರಣಗಳಿಂದಾಗಿ ಎದುರುದಾರ ನಂಬ್ರ 2 ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

ವೈದ್ಯಕಿಯ ದಾಖಲೆ ಪ್ರಕಾರ ನನಗೆ ಯಾವುದೇ ಮೂಳೆ ಮುರಿತ ಆಗಿಲ್ಲ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ